ಸೃಜನಿ

SRUJANI: Indian Journal of Innovative Research and Development (SIJIRD)
Volume-4 Special Issue 1, March-April 2025, Pp. 34-38
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬೆಳಗಾವಿ ಜಿಲ್ಲೆಯಲ್ಲಿ ಸ್ವದೇಶಿ ಮತ್ತು ಖಾದಿ: ಒಂದು ಅವಲೋಕನ

**ಅಂಬರೀಶ ಪಿ.ವಿ**
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**Abstract:**
*ಭಾರತದ ಸ್ವಾತಂತ್ರ್ಯ ಹೋರಾಟದ ಹಾದಿಯಲ್ಲಿ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳು ಮಹತ್ವದ ಪಾತ್ರವನ್ನು ವಹಿಸಿವೆ. ಗಾಂಧೀಜಿಯವರು 1920ರಲ್ಲಿ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿದಾಗ 18 ಅಂಶಗಳನ್ನ ಸೂಚಿಸಿದರು. ಇವು ರಾಷ್ಟ್ರ ನಿರ್ಮಾಣದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಏಕೆಂದರೆ ಇವುಗಳಲ್ಲಿ ಖಾದಿ, ಗ್ರಾಮೋದ್ಯೋಗ, ಗೋಸಂರಕ್ಷಣೆಯಂತಹ ಕಾರ್ಯಕ್ರಮಗಳು ರಾಷ್ಟ್ರದ ಆರ್ಥಿಕ ಅಭಿವೃದ್ಧಿಗೆ ಪೂರಕವಾದರೆ, ಹರಿಜನೋದ್ಧಾರ, ಕೋಮು ಸೌಹಾರ್ದತೆ, ಮೂಲ ಶಿಕ್ಷಣ ಇವು ಸಾಮಾಜಿಕ ಅಭಿವೃದ್ಧಿಗೆ ಪೂರಕವಾಗಿವೆ. ಈ ಅಂಶಗಳಲ್ಲಿ ಖಾದಿ ಪ್ರಧಾನವಾಗಿದ್ದು, ಬೆಳಗಾವಿ ಜಿಲ್ಲೆಯಲ್ಲಿ ಖಾದಿಯ ಪ್ರಚಾರ ಅಭಿವೃದ್ಧಿ ಹೇಗೆ ಆಯಿತು ಎಂಬ ವಿಷಯವನ್ನ ಈ ಲೇಖನದಲ್ಲಿ ಪ್ರಸ್ತುತ ಪಡಿಸಲಾಗಿದೆ.*

**Keywords:** *ಮಹಾತ್ಮ ಗಾಂಧೀಜಿ, ಸ್ವದೇಶಿ, ಗ್ರಾಮೋದ್ಯೋಗ, ಖಾದಿ, ಅಸಹಕಾರ ಚಳುವಳಿ.*

## ಪೀಠಿಕೆ

ಬಾಲಗಂಗಾಧರ ತಿಲಕ್ ಅವರು 1906ರಲ್ಲಿ ಬೆಳಗಾವಿಗೆ ಪ್ರಥಮ ಬಾರಿಗೆ ಭೇಟಿ ನೀಡಿ ಸ್ವದೇಶಿವಸ್ತುಗಳ ಬಳಕೆ ಮತ್ತು ವಿದೇಶಿ ವಸ್ತುಗಳ ಬಹಿಷ್ಕಾರದ ಬಗ್ಗೆ ಪ್ರಥಮ ಬಾರಿಗೆ ಪ್ರಚಾರವನ್ನು ಆರಂಭಿಸಿದರು. ಅಲ್ಲಿನ ಜನತೆಗೆ ಅರ್ಥವಾಗುವಂತೆ ತಿಲಕರು ಗೋಕಾಕ್ ಬಟ್ಟೆಯ ಗಿರಣಿಯೊಂದನ್ನು ಉದಾಹರಣೆಯಾಗಿ ವಿವರಿಸಿದರು. ಇಂದು ಬೆಳಗಾವಿಯಲ್ಲಿರುವ ಗೋಕಟ್ಟೆ ಗಿರಣಿ 20 ಲಕ್ಷ ರೂಪಾಯಿಗಳ ಬಂಡವಾಳದಿಂದ ಬಟ್ಟೆ ಉತ್ಪಾದನೆ ಮಾಡಿ, ಅದು ಪ್ರತಿ ವರ್ಷವೂ 40 ಕೋಟಿ ರೂಪಾಯಿಗಳಷ್ಟು ಬಟ್ಟೆಯನ್ನು ಇಂಗ್ಲೆಂಡಿಗೆ ರಫ್ತು ಮಾಡುತ್ತಿದೆ. ಇಷ್ಟೊಂದು ಅಪಾರ ಮೊತ್ತದ ಹಣ ನಮ್ಮಲ್ಲಿ ಉಳಿದರೆ ಇಂತಹ 200 ರಿಂದ 250 ಗಿರಣಿಗಳನ್ನು ಸ್ವತಃ ನಾವೇ ಸ್ಥಾಪಿಸಬಹುದು ಎಂದು ಹೇಳಿದರು. ಇದರಿಂದ ಸ್ವದೇಶಿಯ ಪ್ರಥಮ ಪ್ರಚಾರ ವಿದೇಶಿ ವಸ್ತುಗಳ ಬಹಿಷ್ಕಾರ ಪ್ರಚಾರವಾಗುತ್ತದೆ ಎಂದು ತಿಲಕರು ಅಭಿಪ್ರಾಯ ಪಟ್ಟರು. ಮತ್ತು ಸ್ವದೇಶಿ ಚಳುವಳಿಗಳು ರಾಷ್ಟ್ರದ ನಿಷೇಧಾತ್ಮಕ ಹಾಗೂ ರಚನಾತ್ಮಕ ಆಂದೋಲನಗಳಿಗೆ ನಾಂದಿಯಾದವು[1]. ಈ ಸ್ವದೇಶಿ ಚಳುವಳಿಯ ಹಿನ್ನೆಲೆಯಲ್ಲಿ ಖಾದಿ ಪ್ರಚಾರವನ್ನು ನಾವು ದೇಶದಲ್ಲಿ ಕಾಣಬಹುದಿತ್ತು.

ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಈ ರೀತಿಯ ಸ್ವದೇಶಿ ಚಳುವಳಿ ವ್ಯಾಪಕವಾಗಿ ಬೆಳೆಯಿತು. ಈ ಕಾರಣದಿಂದಾಗಿ ಬೆಳಗಾವಿಯ ಬಟ್ಟೆ

---

[1] ಶಿವಕುಮಾರ್, ಎ. (2013). ಕರ್ನಾಟಕದಲ್ಲಿ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳ ಒಂದು ಅಧ್ಯಯನ, (ಪಿಎಚ್.ಡಿ ಮಹಾಪ್ರಬಂಧ) ಬೆಂಗಳೂರು ವಿಶ್ವವಿದ್ಯಾಲಯ.

**Please cite this article as:** ಅಂಬರೀಶ, ಪಿ.ವಿ. (2025). ಬೆಳಗಾವಿ ಜಿಲ್ಲೆಯಲ್ಲಿ ಸ್ವದೇಶಿ ಮತ್ತು ಖಾದಿ: ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(1), 34–38

ವ್ಯಾಪಾರಿಗಳು ವಿದೇಶಿ ವಸ್ತ್ರಗಳನ್ನು ಆಮದು ಮಾಡಿಕೊಳ್ಳುವುದನ್ನು ನಿಷೇಧಿಸಿದರು ಹಾಗೆಯೇ ಬೆಳಗಾವಿ ಧಾರವಾಡ ಹುಬ್ಬಳ್ಳಿ ಬಾಗಲಕೋಟೆಗಳಲ್ಲಿ ಸ್ವದೇಶಿ ಅಂಗಡಿಗಳು ಪ್ರಾರಂಭವಾಗಿ ಅಲ್ಲಿ ಸ್ವರಾಜ್ಯ ಸಂಸ್ಥೆಗಳನ್ನು ಸ್ಥಾಪಿಸಲಾಯಿತು[2]. ಹೀಗೆ ಬಾಂಬೆ ಪ್ರಾಂತ್ಯಕ್ಕೆ ಹೊಂದಿಕೊಂಡ ಕರ್ನಾಟಕದ ಭಾಗಗಳಲ್ಲಿ ಅದರಲ್ಲಿಯೂ ಬೆಳಗಾವಿ ಜಿಲ್ಲೆಯಲ್ಲಿ ಸ್ವದೇಶಿ ಚಳುವಳಿ ಮತ್ತು ಬಹಿಷ್ಕಾರ ಚಳುವಳಿಗಳು ಬಹಳ ವ್ಯಾಪಕವಾಗಿ ನಡೆದವು.

ಬೆಳಗಾವಿಯಲ್ಲಿ ಕೇಶವ ಗೋಖಲೆ, ಶ್ರೀನಿವಾಸ ಕೌಜಲಗಿ ಮತ್ತು ಜೈರಾವ್ ನರಗುಂದ ರವರು ಶಾಲೆ ಮತ್ತು ಕೋರ್ಟುಗಳಿಂದ ಹೊರಬಂದರು ವಿದೇಶಿ ವಸ್ತ್ರಗಳ ದಹನ ಮಾಡಿದರು. ಆ ಸಂದರ್ಭದಲ್ಲಿ ವಿದೇಶಿ ವಸ್ತ್ರಗಳ ಬಹಿಷ್ಕಾರ ಸಾಮಾನ್ಯ ಚಟುವಟಿಕೆಯಾಗಿತ್ತು. ಬೆಳಗಾವಿಯಲ್ಲಿ ಸ್ವದೇಶಿ ವಸ್ತು ಪ್ರಚಾರಕ ಸಂಸ್ಥೆ ಜನ್ಮತಾಳಿತು. ಈ ಸಂಸ್ಥೆಯ ಮೂಲಕ ಜನರಿಗೆ ಸ್ವದೇಶಿ ವಸ್ತುಗಳ ಪೂರೈಕೆಗೆ ಸ್ಥಳೀಯ ನಾಯಕರು ವ್ಯವಸ್ಥಿತವಾಗಿ ಕಾರ್ಯಕ್ರಮಗಳನ್ನ ರೂಪಿಸಿದರು ಚರಕಗಳನ್ನು ಮನೆ ಮನೆಗೆ ಹೋಗಿ ಹಂಚಿದರು[3]. ಕಾಶಿ ತಾಯಿ ಗರ್ಜಿ ಮತ್ತು ಗಂಗೂಬಾಯಿ ಸುಹಾನಿ ಎಂಬ ಮಹಿಳೆಯರು ಬೆಳಗಾವಿಯಲ್ಲಿ ಸ್ವದೇಶ ಮತ್ತು ಖಾದಿ ಪ್ರಚಾರದಲ್ಲಿ ತೊಡಗಿದರು ರಾಷ್ಟ್ರೀಯ ಯುವಕ ಸಂಘವು ಬೆಂಗಳೂರಿನಲ್ಲಿ 1936 ರಂದು ಸಭೆ ಸೇರಿ ಅಲ್ಲಿಯೂ ಸಹ ನಿರ್ಣಯಗಳನ್ನು ತೆಗೆದುಕೊಂಡಿತು. ಇದು ಸದೇಶಿ ಚಳುವಳಿಯಲ್ಲಿ ಒಂದು ಮಹತ್ವವಾದ ಘಟನೆ. ಇದರಿಂದಾಗಿ ಕರ್ನಾಟಕದ ಹಲವು ಕಡೆಗಳಲ್ಲಿ ಇದರ ಪ್ರಭಾವ ಹರಡಿತು.

1923ರಲ್ಲಿ ಗಂಗಾಧರ್ ರಾವ್ ದೇಶಪಾಂಡೆ ಅವರು ಸಬರಮತಿ ಆಶ್ರಮದ ಮಾದರಿಯಲ್ಲಿ ಬೆಳಗಾವಿಯಲ್ಲಿ 1923 ರಲ್ಲಿ ಒಂದು ಆಶ್ರಮವನ್ನು ಸ್ಥಾಪಿಸಿದರು. ಈ ಖಾದಿ ಕೇಂದ್ರವನ್ನು ತಮ್ಮ ಜಮೀನಿನಲ್ಲಿ ಸ್ವಂತ ಖರ್ಚಿನಿಂದ ಅವರು ಪ್ರಾರಂಭಿಸಿದರು[4]. ಅದು ಕೇವಲ ಖಾದಿ ಉತ್ಪಾದನೆ ಕೇಂದ್ರವಾಗಿರಲಿಲ್ಲ ಬದಲಿಗೆ ಕರ್ನಾಟಕದ ಹಲವು ಸ್ವತಂತ್ರ ಹೋರಾಟಗಾರರಿಗೆ ತರಬೇತಿಯನ್ನು ನೀಡುವ ಕೇಂದ್ರವು ಸಹ ಆಗಿತ್ತು. ಗಂಗಾಧರ ದೇಶಪಾಂಡೆಯವರ ಜೊತೆಗೆ ರಾಮಚಂದ್ರ ಅಡವಿಯವರು ಸಹ ಈ ಕಾರ್ಯಕ್ರಮದಲ್ಲಿ ಕೈಜೋಡಿಸಿದರು. ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ತರಬೇತಿಯನ್ನು ನೀಡುವುದು ಕೂಡ ಈ ಆಶ್ರಮದ ಪ್ರಮುಖವಾದ ಉದ್ದೇಶ ಆಗಿತ್ತು. ಈ ಆಶ್ರಮದಲ್ಲಿ 1925ರಿಂದ ಖಾದಿ ಉತ್ಪಾದನಾ ಕಾರ್ಯಕ್ರಮಗಳು ಪ್ರಾರಂಭವಾದವು.

1924ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನವು ಕರ್ನಾಟಕ ರಚನಾತ್ಮಕ ಕಾರ್ಯಕ್ರಮಗಳ ಬೆಳವಣಿಗೆಯಲ್ಲಿ ಒಂದು ಐತಿಹಾಸಿಕ ಮೈಲುಗಲ್ಲು ಎಂದು ಹೇಳಬಹುದು. ಏಕೆಂದರೆ ಗಾಂಧೀಜಿಯವರು ಪ್ರಥಮ ಬಾರಿಗೆ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದ್ದು, ಇದೇ ಮೊದಲ ಮತ್ತು ಕೊನೆಯ ಬಾರಿಯಾಗಿತ್ತು. ಗಾಂಧೀಜಿಯವರು ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿಕೊಂಡ ತಕ್ಷಣವೇ ಕರ್ನಾಟಕದ ಹಲವಾರು ಕಾಂಗ್ರೆಸ್ ನಾಯಕರು ಗಾಂಧಿಯವರಿಗೆ ಪ್ರಿಯವಾದಂತಹ ಖಾದಿಯಿಂದಲೇ ಅವರ ಕುಟೀರವನ್ನು ಸಿದ್ಧಗೊಳಿಸಿದರು. ದಿನಾಂಕ 26/12/1924 ರಂದು ಬೆಳಗಾವಿ ಅಧಿವೇಶನದ ಅಧ್ಯಕ್ಷೀಯ ಭಾಷಣದಲ್ಲಿ ಗಾಂಧೀಜಿಯವರು ಖಾದಿಯನ್ನು ಕುರಿತು “ನಾವು ಈಗಾಗಲೇ ಸುಮಾರು ವರ್ಷಗಳಿಂದ ದೇಶದಲ್ಲಿನ ಪ್ರತಿಯೊಬ್ಬರೂ ಖಾದಿಯನ್ನು ನೂಲಬೇಕೆಂದು ಪ್ರಚಾರ ಮಾಡುತ್ತಿದ್ದರೂ ಸಹ ಖಾದಿ ಪ್ರಚಾರವನ್ನು ಯಾರೂ ಅಷ್ಟಾಗಿ ಪ್ರಚಾರ ಮಾಡುತ್ತಿಲ್ಲ ಆದ್ದರಿಂದ

[2] ಅದೇ.

[3] ನಾಗರತ್ನಮ್ಮ, ಎಸ್. (2009). *ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರೀಕ ಕಾನೂನು ಭಂಗ ಚಳುವಳಿ.*

[4] ಶಿವಕುಮಾರ್, ಎ. (2013). ಪೂರ್ವೋಕ್ತ.

ಕಾಂಗ್ರೆಸ್‌ನ ಕಾರ್ಯಕರ್ತರು ಮತ್ತು ಅಖಿಲ ಭಾರತ ಕಾಂಗ್ರೆಸ್ ಮಹಾ ಅಧಿವೇಶನಗಳಲ್ಲಿ ರಾಟೆಯ ಮೂಲಕ ನಮ್ಮ ಸ್ವರಾಜ್ಯ ಸ್ಥಾಪನೆಯಾಗಬೇಕೆಂದು ಹೇಳುತ್ತಿರುವುದು ಕೇವಲ ಮಾತಿನ ಪ್ರಚಾರವಾಗದೇ ಖಾದಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಬೇಕೆಂದು ಕರೆ ನೀಡಿದರು. ಕಾಂಗ್ರೆಸ್ ಸದಸ್ಯರಾಗಲು ಬಯಸುವವರು ನಾಲ್ಕಾಣೆ ಖಾದಿಯನ್ನು ಕೊಂಡುಕೊಳ್ಳುವುದರ ಮೂಲಕ ದೇಶದಾದ್ಯಂತ ಖಾದಿಯನ್ನು ಪ್ರಚಾರಗೊಳಿಸಬೇಕು, ಮುಂದುವರೆದು, ಕಾಂಗ್ರೆಸ್ ಅಧ್ಯಕ್ಷರಾಗುವವರು ಪ್ರತಿದಿನವೂ ಅರ್ಧ ಗಂಟೆಯ ಕಾಲ ನೂಲು ತೆಗೆದು ತಿಂಗಳಿಗೆ ಎರಡು ಸಾವಿರ ಗಜ ಉದ್ದ ಖಾದಿಯನ್ನು ಖಾದಿಬೋರ್ಡ್‌ಗೆ ಕಳುಹಿಸಿಕೊಡಬೇಕು ಎಂದು ಸೂಚಿಸಿದರು. ಜೊತೆಗೆ ಚರಕ ಕಾರ್ಯಕ್ರಮದ ಬಗ್ಗೆ ವಿವರಣೆ ನೀಡುತ್ತಾ ಚರಕಕ್ಕೆ ಯಾವುದೇ ಭೇದಭಾವವಿಲ್ಲ ಒಂಟಿಯಾಗಿಯೂ ಸಹ ಅದನ್ನು ಮಾಡಬಹುದು ಆದರೆ ಚರಕ ಕಾರ್ಯಕ್ರಮವು ಅಪಾರವಾಗಿ ನಡೆಯದೇ ಇದ್ದರೆ ವಿದೇಶಿ ವಸ್ತ್ರ ಬಹಿಷ್ಕಾರ ಸಂಪೂರ್ಣವಾಗಿ ನಡೆಯುವುದಿಲ್ಲ. ಆದ್ದರಿಂದ ಚರಕ ಕಾರ್ಯಕ್ರಮ ಪೂರ್ಣ ಪ್ರಮಾಣದಲ್ಲಿ ನಡೆಯಬೇಕು ಎಂದು ನನಗೆ ಅನಿಸುತ್ತದೆ. ಈ ಸುತ್ತುಗಳನ್ನು 30 ಕೋಟಿ ಜನಸಂಖ್ಯೆಯಿಂದ ಗುಣಿಸಿ ಅದರಿಂದ ಸ್ವರಾಜ್ ಪ್ರಾಪ್ತಿಗೆ ಎಷ್ಟು ವೇಗ ಬರುತ್ತದೆ ನೋಡಿ ಆ ಪ್ರಗತಿ ವೇಗ ಬರಬೇಕಾದರೆ ನೂಲುವ ಕ್ರಿಯೆಯಲ್ಲಿ ಸ್ವರಾಜ್ಯ ಸ್ಥಾಪನೆಯ ಶಕ್ತಿ ಅಡಗಿದೆ ಎಂಬ ನನ್ನಲ್ಲಿರುವ ದೃಢ ವಿಶ್ವಾಸದ ಕಾವು ನಿಮ್ಮಲ್ಲೂ ಉಂಟಾಗಬೇಕು" [5] ಎಂದು ಮಾತನಾಡಿ ಜನತೆಯನ್ನು ಖಾದಿಯತ್ತ ನಡೆಯಲು ಪ್ರಚೋದಿಸಿದರು.

ಕರ್ನಾಟಕದಿಂದ ಸುಮಾರು 800 ಕಾಂಗ್ರೆಸ್ ಕಾರ್ಯಕರ್ತರು ಈ ಅಧಿವೇಶನದಲ್ಲಿ ಭಾಗವಹಿಸಿ ತಮ್ಮ ಸ್ವಂತ ಸ್ಥಳಗಳಿಗೆ ಹಿಂದುರಿಗಿದ ನಂತರ ಕಾರ್ಯಕರ್ತರು ಬಹಳಷ್ಟು ಪ್ರಭಾವಿತರಾಗಿ, ಖಾದಿ, ಸ್ವದೇಶಿ ಪ್ರಚಾರ ಮತ್ತು ವಿದೇಶಿ ವಸ್ತುಗಳ ಬಹಿಷ್ಕಾರದಂತಹ ಚಟುವಟಿಕೆಗಳನ್ನು ಕರ್ನಾಟಕದಾದ್ಯಂತ ಹಮ್ಮಿಕೊಂಡರು. ಬೆಳಗಾವಿಯೂ ಸಹ ಇದಕ್ಕೆ ಹೊರತಾಗಿರಲಿಲ್ಲ, ಕರ್ನಾಟಕದಲ್ಲಿ ಗಂಗಾಧರ ದೇಶಪಾಂಡೆ ರಾಮಚಂದ್ರ ಅಡವಿ, ತಗಡೂರು ರಾಮಚಂದ್ರರಾವ್, ಬಳ್ಳಾರಿಯ ಟಿ.ಬಿ. ಕೇಶವರಾವ್, ಹಂಬಲಿ ಚೆನ್ನಬಸಪ್ಪ ಹೊಸಮನಿ, ಮೈಲಾರ ಮಹದೇವಪ್ಪ, ತಿಮ್ಮಪ್ಪ ಮಾಸ್ತರ, ಶಂಕರ ಕುರ್ತುಕೋಟಿ, ಕೌಜಲಗಿ ಹಣಮಂತರಾವ್ ಮತ್ತು ಬಿ.ಸಿ. ನಂಜುಂಡಯ್ಯ ಇನ್ನಿತರೆ ಕಾಂಗ್ರೆಸ್ ಕಾರ್ಯಕರ್ತರು ಖಾದಿ ಪ್ರಚಾರ ಮಾಡಿ ಜನತೆಯಲ್ಲಿ ಜಾಗೃತಿಯನ್ನು ಮೂಡಿಸಿದರು.

ಬೆಳಗಾವಿ ಜಿಲ್ಲೆಯಲ್ಲಿ ಗಂಗಧರಾವ್ ದೇಶಪಾಂಡೆ, ನರಸಿಂಹ ದಬಾಡೆ, ಅಣ್ಣುಗುರೂಜಿ, ಬಾಲಪ್ಪ ಉಕ್ಕೇರಿ, ಕಾಕಸಾಹೇಬ್ ಕಾಳಿಕೇರ್, ವಿಠ್ಠಲ್ ರಾವ್ ಕೃಷ್ಣರಾವ್ ಯಾಳಗಿ, ಗೋವಿಂದರಾವ್ ಯಾಳಗಿ ಮತ್ತೀತರರು ಖಾದಿ ಪ್ರಚಾರವನ್ನ ಬೆಳಗಾವಿ ಜಿಲ್ಲೆಯಾದ್ಯಂತಹ ನಡೆಸಿದರು. ಬೆಳಗಾವಿ ಜಿಲ್ಲೆಯಾದ್ಯಂತ ಸ್ವದೇಶಿ ಖಾದಿ ಪ್ರಚಾರ ಕಾರ್ಯ ನಡೆಯಿತು ಇದರಿಂದಾಗಿ ಜಿಲ್ಲೆಯ ಹುದಲಿ, ಪಚ್ಚಾಪುರ ಮುಂತಾದ ಸ್ಥಳಗಳಲ್ಲಿ ಖಾದಿ ಉತ್ಪಾದನೆಯನ್ನು ಹೆಚ್ಚಿಸಲಾಯಿತು. ಈ ವೇಳೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಸ್ವದೇಶಿ ಬಟ್ಟೆ ಗಿರಣಿಗಳಿಗೆ ಉತ್ತೇಜನ ನೀಡಲು ನಿರ್ಧರಿಸಿ ಜನರ ಅಗತ್ಯವನ್ನು ಪೂರೈಸುವುದು ಸಾಧ್ಯವಿರಲಿಲ್ಲ. ಸ್ವದೇಶಿ ಬಟ್ಟೆಯನ್ನು ಉತ್ಪಾದಿಸುವುದರ ಜೊತೆಯಲ್ಲಿ ವಿದೇಶಿ ಬಟ್ಟೆಯನ್ನು ಗಂಟು ಕಟ್ಟಿ ಆ ಘಂಟೆಗೆ ಮುದ್ರೆ ಹಾಕಿ ಇಡುವಂತಹ ತೀರ್ಮಾನವನ್ನು ಕೈಗೊಂಡ ಮೇಲೆ ವಿದೇಶಿ ಬಟ್ಟೆ ಆಮದಿನ ಪ್ರಮಾಣದ ಮೇಲೆ ಈ ಚಳುವಳಿ ಬಹಳಷ್ಟು ಪ್ರಭಾವವನ್ನು ಬೀರಿತು.

ಬೆಳಗಾವಿ ಜಿಲ್ಲೆಯಲ್ಲಿ ಖಾದಿ ಪ್ರಚಾರಕ್ಕೋಸ್ಕರ ಖಾದಿ ಕೇಂದ್ರಗಳನ್ನು ಪ್ರಧಾನವಾಗಿ ನಾವು

[5] ಸಿದ್ದವ್ವನ ಹಳ್ಳಿ ಕೃಷ್ಣಶರ್ಮ. (1970). *ಗಾಂಧೀ ಸ್ಮಾರಕ ನಿಧಿ.* ಪುಟ, ಸಂ.56–73

ಕಾಣಬಹುದು ಗಾಂಧೀಜಿಯವರು ಗುಜರಾತಿನಲ್ಲಿ ಸಬರಮತಿ ಆಶ್ರಮವನ್ನು ಸ್ಥಾಪಿಸಿದ ನಂತರ ಅದೇ ಮಾದರಿಯಲ್ಲಿ ಕರ್ನಾಟಕದಲ್ಲಿ ಖಾದಿ ಕೇಂದ್ರಗಳು ಪ್ರಾರಂಭವಾದವು. 1925ರಿಂದ ಖಾದಿ ಉತ್ಪಾದನಾ ಕಾರ್ಯವನ್ನು ಪ್ರಾರಂಭ ಮಾಡಿದ್ದು ಈ ಖಾದಿ ಕೇಂದ್ರದ ಸಂಪೂರ್ಣ ಜವಾಬ್ದಾರಿಯನ್ನ ಗಂಗಾಧರ ದೇಶ ಪಾಂಡೆ ಅವರು ವಹಿಸಿದ್ದರು.

ಶ್ರೀಯುತರ ಈ ಆಹ್ವಾನವನ್ನು ಸ್ವೀಕರಿಸಿದ ಹಲವಾರು ಹೆಣ್ಣುಮಕ್ಕಳು ಬಂದು ಖಾದಿಯನ್ನ ಉತ್ಪಾದನೆ ಮಾಡುವಂತಹ ಕೆಲಸದಲ್ಲಿ ತೊಡಗಿದರು. ಇದರ ಜೊತೆಗೆ ರಾಮಚಂದ್ರ ಅಡವಿ, ಗಂಗಪ್ಪ ಯಮಕನ ಮರಡಿ, ಪುಂಡಲಿ ಕಾಜಿ ಕಾ ತಾಳವಾಡೆ, ಹುದಲಿಯಲ್ಲಿ ವಾಮನ ಬಿದರಿಯವರು ಅಕ್ಕತಂಗೇರ ಹಾಳದಲ್ಲಿ, ಅಣ್ಣುಗುರೂಜಿ ಅವರು, ಪಚ್ಚಾಪುರದಲ್ಲಿ ಹೀಗೆ ಪ್ರತಿಯೊಬ್ಬರೂ ಒಂದೊಂದು ಭಾಗದಲ್ಲಿ ಖಾಲಿ ಕಾರ್ಯವನ್ನು ನಿರ್ವಹಿಸುತ್ತಾ, ಕಾರ್ಯ ಚಟುವಟಿಕೆಗಳನ್ನು ಮತ್ತಷ್ಟು ಮುಂದುವರಿಸಿದರು.

ಹುದಲಿ ಭಾಗದಲ್ಲಿ ತಯಾರಾದಂತಹ ಖಾದಿ ಉತ್ಪಾದನೆಯನ್ನು ಚರಕ ಸಂಘದ ವತಿಯಿಂದ ಬೆಳಗಾವಿಯಲ್ಲಿದ್ದ ಎಲ್ಲಾ ಖಾದಿ ಅಂಗಡಿಗಳಿಗೂ ಸಹ ಕಳಿಸಲಾಗುತ್ತಿತ್ತು. ನಂತರ ಗಂಗಪ್ಪ ಯಮಕನಮರಡಿ ಅಣ್ಣ ಬಸಪ್ಪ ಮರಲಿಂಗಪ್ಪನವರ ತಿಪ್ಪಣ್ಣ ಬೇಟಗೆರೆ ಇವರುಗಳು ಚರಕ ಸಂಘದ ಕಾರ್ಯಕರ್ತರಾಗಿ ಕೆಲಸ ನಿರ್ವಹಿಸಿದರು. ತದನಂತರ ಬೆಳಗಾವಿ ಜಿಲ್ಲೆಯಲ್ಲಿ ಚರಕ ಪ್ರಚಾರ ಕಾರ್ಯಕ್ರಮಗಳು ಸಹ ಬಹಳಷ್ಟು ನಡೆದವು. 1936ರಲ್ಲಿ ಹುದಲಿಯಲ್ಲಿ ತರುಣಸಂಘ ಎಂಬ ಸಂಸ್ಥೆ ಜನ್ಮತಾಳಿತು. ಈ ಸಂಘದ ಸದಸ್ಯರುಗಳು ಖಾದಿದಾರಿಗಳಾಗಿದ್ದರು. ಬೇಟಗೆರಿ ಇವರುಗಳು ಪ್ರತಿದಿನ ಅಂಜು ತಯಾರಿಕೆ ಉತ್ಪಾದನೆ ಮಾಡುತ್ತಿದ್ದು ಈ ಕೇಂದ್ರದಲ್ಲಿ ಖಾದಿ ಉತ್ಪಾದನೆಯನ್ನು ದ್ವಿಗುಣಗೊಳಿಸಿದರು. ಇಲ್ಲಿ ಒಂದು ವಾರಗಳ ಕಾಲ ಅಖಿಲ ಭಾರತ ಖಾದಿ ಸಮ್ಮೇಳನ ನಡೆಯಿತು. ಈ ಸಮ್ಮೇಳನವನ್ನು ಗಂಗಾಧರರಾಯರು ಆಶ್ರಮದ ಹಿರಿಯ ಕಾರ್ಯಕರ್ತರಾಗಿದ್ದಂತಹ, ಪುಂಡಲಿಕಜಿ, ಶ್ರೀ ವಡವಿ, ಅಣ್ಣ ಗುರೂಜಿ, ವಾಮನ್ ರಾವ್ ಬಿದರಿ ಅವರ ಸಹಕಾರದೊಂದಿಗೆ ಸಂಘಟಿಸಿದ್ದರು. ಇಲ್ಲಿ ಇನ್ನೊಂದು ವಿಶೇಷ ಎಂದರೆ ಗಾಂಧೀಜಿಯವರು ಈ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದು, ಸಹ ಕರ್ನಾಟಕದ ಬೆಳಗಾವಿ ಜನತೆಗೆ ಖಾದಿಯ ಒಂದು ಪ್ರಚಾರದಲ್ಲಿ ಮತ್ತಷ್ಟು ಹುರಪನ್ನು ನೀಡಿತು ಎಂದು ಹೇಳಬಹುದು. ಇವರು ಈ ಕಾರ್ಯಕ್ರಮದಲ್ಲಿ ಹೆಚ್ಚು ಸಕ್ರಿಯವಾಗಿ ಭಾಗವಹಿಸಿದ್ದರು. ನಂತರ ಖಾದಿ ಪ್ರದರ್ಶನವನ್ನು ಸಹ ಈ ಸಂದರ್ಭದಲ್ಲಿ ಏರ್ಪಡಿಸಲಾಗಿತ್ತು.

ಈ ಸಂಸ್ಥೆ 1936ರಲ್ಲಿ ಅಖಿಲ ಭಾರತ ಚರಕ ಸಂಘದ ಮೇಲ್ವಿಚಾರಣೆಯನ್ನು ಗಂಗಾಧರರಾವ್ ದೇಶಪಾಂಡೆಯವರು ವಹಿಸಿಕೊಂಡಿದ್ದರು. ಪ್ರಗತಿಪರವಾಗಿ ನಡೆಯುತ್ತಿರುವಾಗಲೇ ವಾರ್ಧಾ ಆಶ್ರಮದ ಮಾದರಿಯಲ್ಲಿ ಉದಯಲು ಸಹ ವಿದ್ಯಾಲಯವನ್ನು ಪ್ರಾರಂಭಿಸಿ. ಈ ಭಾಗದ ಸತ್ಯಾಗ್ರಹಗಳಿಗೆ ಖಾದಿಯನ್ನು ತಯಾರಿಸುವ ಬಗ್ಗೆ ತರಬೇತಿಯನ್ನು ನೀಡಬೇಕೆಂಬುದು ಇದರ ಆಶಯವಾಗಿದ್ದು, ಪ್ರಾರಂಭದಲ್ಲಿ ಈ ವಿದ್ಯಾಲಯಕ್ಕೆ ದುರ್ಯೋಧನ ಸಿಂಗೆಯವರು ಶಿಕ್ಷಕರಾಗಿ ಕೆಲಸ ನಿರ್ವಹಿಸಿದರು. ಈ ವಿದ್ಯಾಲಯ ಪ್ರಾರಂಭವಾದ ಒಂದು ವರ್ಷದ ನಂತರ ಸೇವಾ ಗ್ರಾಮದಿಂದ ದೇವತಾರ ಬಾಯಿ, ಕಿಶೋರ ಲಾಲಾಜಿಯವರು ಜಮನ್ ಲಾಲ್ ಬಜಾಜ್ ಖಾದಿ ವಿದ್ಯಾಲಯಕ್ಕೆ ಭೇಟಿ ನೀಡಿದರು. ನಂತರ ಎರಡನೇ ತಂಡದ ತರಬೇತಿ ಕಾರ್ಯವು 1942ರ ಜೂನಲ್ಲಿ ಅವರ ಮಾರ್ಗದರ್ಶನದಲ್ಲಿ ನಡೆಯಿತು ನಂತರದ ದಿನಗಳಲ್ಲಿ ಆಶ್ರಮ ಸತ್ಯಾಗ್ರಹದ ಕಾರ್ಯಕರ್ತರ ಚಲೇಜಾವ್ ಚಳುವಳಿಯ ಕಾರಣದಿಂದ ಬಂಧನಕ್ಕೆ ಒಳಪಡಿಸಿದಾಗ, ಈ ವಿದ್ಯಾಲಯದ ಕಾರ್ಯ ಚಟುವಟಿಕೆಗಳು ಸ್ವಲ್ಪಮಟ್ಟಿಗೆ ಸ್ಥಗಿತಗೊಂಡು ನಂತರ 1944 ರಲ್ಲಿ ಪ್ರಾರಂಭವಾದವು

**ಉಪಸಂಹಾರ**

ಕರ್ನಾಟಕದಲ್ಲಿ ಸ್ವದೇಶಿ ಮತ್ತು ಖಾದಿ ಪ್ರಚಾರಗಳು 1905ರಲ್ಲಿ ಗೋಚರವಾದರು. ಅವು ವ್ಯಾಪಕವಾಗಿ ಪ್ರಚಾರದಲ್ಲಿ ಬಂದಿದ್ದು, 1920ರ ನಂತರದಲ್ಲಿ ಅದರಲ್ಲಿಯೂ ವಿಶೇಷವಾಗಿ ಬೆಳಗಾವಿ ಜಿಲ್ಲೆಯಲ್ಲಿ 1924ರ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ನಂತರ ವ್ಯಾಪಕವಾಗಿ ನಡೆದವು. ಈ ಭಾಗದಲ್ಲಿ ಹುದಲಿಯಲ್ಲಿ ಖಾದಿ ಗ್ರಾಮೋದ್ಯೋಗ ಮಂಡಲಿ ಜನ್ಮತಾಳಿ ಖಾದಿ ಉತ್ಪಾದನೆಯಲ್ಲಿ ತೊಡಗಿ ಇದನ್ನು ಹೆಚ್ಚಾಗಿ ಪ್ರಚುರಗೊಳಿಸಿತು ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು**


- ಕುಲಕರ್ಣಿ, ಆರ್.ಎಚ್ (1992). *ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿ.* ವೆಂಕಟೇಶ್ವರ ಪ್ರಕಾಶನ.
- ನಾಗರತ್ನಮ್ಮ, ಎಸ್. (2009). *ಕರ್ನಾಟಕದಲ್ಲಿ ಅಸಹಕಾರ ಮತ್ತು ನಾಗರಿಕ ಕಾನೂನು ಭಂಗ ಚಳುವಳಿ*, ದೇಶಿ ಪುಸ್ತಕ ಪ್ರಕಾಶನ.
- ಸಿದ್ದವ್ವನ ಹಳ್ಳಿ ಕೃಷ್ಣಶರ್ಮ. (1970). *ಗಾಂಧೀ ಮತ್ತು ಕರ್ನಾಟಕ–ಗಾಂಧೀ ಸ್ಮಾರಕ ನಿಧಿ.*
- ಸೂರ್ಯನಾಥ್ ಕಾಮತ್ ಮತ್ತು ದಾನಿ ಸುರೇಂದ್ರ. (1988). ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು.
- ಸೂರ್ಯನಾಥ್ ಕಾಮತ್. (1974). *ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು. ಸಂಪುಟ–1*
- ಸೂರ್ಯನಾಥ್ ಕಾಮತ್. *ಬೆಳಗಾಂ ಜಿಲ್ಲಾ ಗೆಜಿಟೆರ್*